## ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3925

ಸದಸ್ಯರ ಹೆಸರು : ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ (ಕಿತ್ತೂರು)

ವಿಷಯ : ಕಿತ್ತೂರಿಗೆ ವಿಶೇಷ ತಹಶೀಲ್ದಾರ್ ನೇಮಕ

ಉತ್ತರಿಸುವ ಸಚಿವರು : ಶ್ರೀ ಎಂ.ಪಿ. ಪ್ರಕಾಶ್ ಮಾನ್ಯ ಕಂದಾಯ ಸಚಿವರು

ಉತ್ತರಿಸುವ ದಿನಾಂಕ : 11.07.2005

| | ಪ್ರಶ್ನೆ | ಉತ್ತರ |
|---|---|---|
| ಅ | ಕಿತ್ತೂರು ಗ್ರಾಮಕ್ಕೆ ವಿಶೇಷ ತಹಶೀಲ್ದಾರ್ ನೇಮಕ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸರ್ಕಾರದ ಆದೇಶ ಸಂಖ್ಯೆ: ಕಂಇ 09 ಎಎಸ್‌ಡಿ 2003, ದಿನಾಂಕ: 5.3.2003ರನ್ವಯ ಕಿತ್ತೂರಿಗೆ ವಿಶೇಷ ತಹಶೀಲ್ದಾರ್ ಎಂದು ಶ್ರೀ ಎಂ.ಎಂ. ತಿಗಡಿ ಇವರು ಸೇವೆ ಸಲ್ಲಿಸುತ್ತಿದ್ದಾರೆ. |
| ಆ | ಹಾಗಿದ್ದಲ್ಲಿ ಮೂಲಭೂತ ಸೌಕರ್ಯಗಳಾದ ಕಛೇರಿ, ಸಿಬ್ಬಂದಿಯನ್ನು ಒದಗಿಸದಿರಲು ಕಾರಣವೇನು: | ಸರ್ಕಾರ ಯಾವುದೇ ತರಹದ ಸಿಬ್ಬಂದಿಯನ್ನು ಇದುವರೆವಿಗೂ ನಿಗದಿಪಡಿಸಿರುವುದಿಲ್ಲ, ಅದಾಗ್ಯೂ, ಸರ್ಕಾರಿ ಆದೇಶ ಸಂಖ್ಯೆ: ಕಂಇ 204 ಎಎಸ್‌ಡಿ 2003, ದಿನಾಂಕ: 31.1.2004ರಲ್ಲಿ ಸಂಬಂಧಿಸಿದ ತಾಲ್ಲೂಕು ಕಛೇರಿಗಳಲ್ಲಿ ಇರುವ ಸಿಬ್ಬಂದಿಯಿಂದಲೇ ವಿಶೇಷ ತಹಶೀಲ್ದಾರ್ ಕಛೇರಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುವಂತೆ ಸಂಬಂಧಪಟ್ಟ ಜಿಲ್ಲಾಕಾರಿಗಳಿಗೆ ಸೂಚಿಸ |
| ಇ | ವಿಶೇಷ ತಹಶೀಲ್ದಾರರ ಕಾರ್ಯವ್ಯಾಪ್ತಿಯೇನು: | ಸರ್ಕಾರಿ ಆದೇಶ ಸಂಖ್ಯೆ: ಕಂಇ 204 ಎಎಸ್‌ಡಿ 2003, ದಿನಾಂಕ:31.1.2004 ರಲ್ಲಿ ಅವರ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಲಾಗಿದೆ. |

| | | |
|---|---|---|
| ಈ | ಹಳ್ಳಿಯ ಬಡ ವಿದ್ಯಾರ್ಥಿಗಳು ಜಾತಿ/ಉತ್ಪನ್ನ ಪ್ರಮಾಣ ಪತ್ರವನ್ನು ಇವರಿಂದ ಪಡೆಯಲು ಅವಕಾಶ ಕಲ್ಪಿಸುವ ವಿಚಾರ ಸರ್ಕಾರಕ್ಕೆ ಇದೆಯೇ; | ಸರ್ಕಾರಿ ಆದೇಶ ಸಂಖ್ಯೆ: ಕಂಇ 204 ಎಎಸ್‌ಡಿ 2003, ದಿನಾಂಕ: 31.1.2004ರಲ್ಲಿ ಆದಾಯ ಪ್ರಮಾಣ ಪತ್ರ ಹಾಗೂ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡುವ ಅಧಿಕಾರವನ್ನು ನೀಡಲಾಗಿದೆ. |
| ಈ | ಹಾಗಿದ್ದಲ್ಲಿ ತ್ವರಿತವಾಗಿ ಕ್ರಮಕೈಗೊಳ್ಳಲಾಗುವುದೇ? | ಉದ್ಭವಿಸುವುದಿಲ್ಲ. |

**ಪ್ರಶ್ನೆ ಸಂಖ್ಯೆ 3925**

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಮಾರಿಹಾಳ ಸುರೇಶ ಶಿವರುದ್ರಪ್ಪ** :– ನಮ್ಮ ಕ್ಷೇತ್ರವಾದ ಕಿತ್ತೂರಿಗೆ 2003ನೇ ಇಸವಿಯಲ್ಲಿ ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಿದ್ದಾರೆ. ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಿದ್ದರೂ, ನಮ್ಮ ಕ್ಷೇತ್ರದ ಜನತೆಗೆ ಅದರಿಂದ ಏನೇನೂ ಉಪಯೋಗವಾಗಿಲ್ಲ. ಇದುವರೆಗೂ ಆ ಆಫೀಸಿಗೆ ಒಬ್ಬ ಸಿಬ್ಬಂದಿ ವರ್ಗದವರನ್ನೂ ಕೊಟ್ಟಿಲ್ಲ. ವಿಶೇಷ ತಹಶೀಲ್ದಾರ್ ಆದಂಥವರಿಗೆ ಕಾರ್ಯವ್ಯಾಪ್ತಿ ಪ್ರದೇಶವನ್ನು ಗುರುತಿಸಿಲ್ಲ. ಹೀಗಾಗಿ ವಿಶೇಷ ತಹಶೀಲ್ದಾರರನ್ನು ನೇಮಿಸಿಯೂ ಕೆಲಸಕಾರ್ಯಗಳನ್ನು ಏಕೆ ಮಾಡತ್ತಿಲ್ಲ ಎನ್ನುವ ಪ್ರಶ್ನೆಯರನ್ನು ನಮ್ಮ ಮತ ಕ್ಷೇತ್ರದ ಜನರು ನಮ್ಮನ್ನು ಕೇಳುತ್ತಿ ದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರ ಮೂಲಕವಾಗಿ ನಾನು ಕಂದಾಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ವಿಶೇಷ ತಹಶೀಲ್ದಾರರ ಕಾರ್ಯವ್ಯಾಪ್ತಿ ಯೇನು? ಅವರ ಕೆಲಸ ಕಾರ್ಯಗಳೇನು? ಅವರ ಜವಾಬ್ದಾರಿಗಳೇನು? ಎನ್ನುವುದನ್ನು ಕೂಲಂಕುಷವಾಗಿ ತಿಳಿಸಿಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ : (ಬೃಹತ್, ಮಧ್ಯಮ ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಮೂಲಸೌಲಭ್ಯಗಳ ಅಭಿವೃದ್ಧಿ ಸಚಿವರು)** (ಮಾನ್ಯ ಕಂದಾಯ ಸಚಿವರ ಪರವಾಗಿ ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈ ವರ್ಷ ಯಾವುದೇ ಹೊಸ ತಾಲ್ಲೂಕುಗಳನ್ನು ಮಾಡಬಾರದು ಎನ್ನುವುದು ಸರ್ಕಾರದ ನೀತಿಯಾಗಿದೆ. ಆದರೆ ಈ ಹಿಂದೆ, ಗದ್ದಿಗೌಡ ಹುಂಡೇಕರ್‌ರವರ ಅಧ್ಯಕ್ಷತೆಯಲ್ಲಿ ಆಗಿರುವಂಥ ಸಮಿತಿಗಳ ವರದಿಗಳ ಆಧಾರದ ಮೇಲೆ ರಾಜ್ಯದಲ್ಲಿ 26 ಹೊಸ ತಾಲ್ಲೂಕುಗಳನ್ನು ಮಾಡಬೇಕು ಎಂದು ಘೋಷಣೆಯಾಗಿದೆ. ಆದರೆ ಹಣಕಾಸಿನ ಇತಿಮಿತಿಯ ವ್ಯಾಪ್ತಿಯಲ್ಲಿ ಈ ಹೊಸ ತಾಲ್ಲೂಕುಗಳನ್ನು ಮಾಡಲು ಸಾಧ್ಯವಾಗಿಲ್ಲ. ಆದರೆ ಎಲ್ಲೆಲ್ಲಿ 26 ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದಿದ್ದೇವೆ, ಅಲ್ಲಿಗೆ ಸ್ಪೆಷಲ್ ತಹಶೀಲ್ದಾರ್‌ಗಳನ್ನು ನೇಮಕ ಮಾಡಿರುವಂಥ ಅಜ್ಞೆಯನ್ನು ಹೊರಡಿಸಿದ್ದೇವೆ. 2003ರಿಂದ ಅಲ್ಲಿ ವಿಶೇಷ ತಹಶೀಲ್ದಾರ್‌ರವರು ಕೆಲಸ ಮಾಡುತ್ತಿದ್ದಾರೆ. ಇನ್ನು,ಅವರ ಕಾರ್ಯವ್ಯಾಪ್ತಿಯ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಸರ್ಕಾರದ ಆದೇಶದ ಸಂಖ್ಯೆ 204, ದಿನಾಂಕ 31.01.2004ರಲ್ಲಿ ಅವರ ಕಾರ್ಯವ್ಯಾಪ್ತಿಯೇನು ಎನ್ನುವುದನ್ನು ಸಹ

ನಾವು ನಿಗಡಿಪಡಿಸಿದ್ದೇವೆ. ಆದರೂ, ಕಿತ್ತೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರತಕ್ಕಂಥ ಜನಗಳಿಗೆ ಸಮಸ್ಯೆ ಇರುವುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಕಂದಾಯ ಸಚಿವರು ವಿಶೇಷವಾಗಿ ಪರಿಗಣಿಸುತ್ತಾರೆಂದು ತಿಳಿಸುತ್ತೇನೆ. ಕಿತ್ತೂರಿನಲ್ಲಿವೇ ಅಲ್ಲ. ಎಲ್ಲೆಲ್ಲಿ ವಿಶೇಷ ತಹಶೀಲ್ದಾದರುಗಳನ್ನು ನೇಮಕಮಾಡಿ ದ್ದೇವೆ. ಅಂಥ ಕಡೆಗಳಲ್ಲಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಲು ನಾವು ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ** :– ನಮ್ಮ ಕ್ಷೇತ್ರದ ಜನತೆಗೆ ಭೂಮಿಯ ಉತಾರವನ್ನು ಕೊಡುವ ಯಂತ್ರಕ್ಕೆ ಅರ್ಡರ್ ಆಗಿದೆ ಎಂದು ಮಾನ್ಯ ಕಂದಾಯ ಸಚಿವರು ಹೇಳಿದ್ದರು. ಆದರೆ ಇದುವರೆಗೂ ಆ ಕೆಲಸವೂ ಆಗಿಲ್ಲ. ಸ್ಕೂಲ್ ಹುಡುಗರಿಗೆ ಸರ್ಟಿಫಿಕೇಟ್ ಬೇಕಾದರೆ, ಅದನ್ನು ನಮ್ಮ ತಾಲ್ಲೂಕಿನಿಂದ ಬೈರಮಂಗಲ ತಾಲ್ಲೂಕಿಗೆ ನಾಲ್ಕು ಕಿ.ಮೀ. ಹೋಗಿ ತರಬೇಕಾ ಗಿದೆ. ಹಾಗಾಗಿ, ಅದಕ್ಕೂ ಒಂದು ಆದೇಶವನ್ನು ಸರ್ಕಾರ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ.ಪಿ.ಜಿ.ಆರ್. ಸಿಂಧ್ಯಾ** :– ಯಂತ್ರವನ್ನು ಕೊಡತಕ್ಕಂಥದ್ದರ ಬಗ್ಗೆ ಮತ್ತು ಕ್ಯಾಸ್ಟ್ ಸರ್ಟಿಫಿಕೇಟ್ ಕೊಡತಕ್ಕಂಥ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಏನೊಂದು ಸಮಸ್ಯೆಯನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ತಾಲ್ಲೂಕಿನ ವಿಶೇಷ ತಹಶೀಲ್ದಾರರಿಗೆ ಸೂಚನೆಯನ್ನು ಕೊಟ್ಟು ನಾವು ಅದನ್ನು ಬಗೆಹರಿಸುತ್ತೇವೆ ಎನ್ನತಕ್ಕಂಥ ಬರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 4914**

(ಈ ಸಮಯದಲ್ಲಿ ಮಾನ್ಯ ಸದಸ್ಯರಾದ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಸದನದಲ್ಲಿ ಹಾಜರಿರಲಿಲ್ಲ)

**ಪ್ರಶ್ನೆ ಸಂಖ್ಯೆ 5172**

(ಈ ಸಮಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ನಾಯಕರವರು ಸದನದಲ್ಲಿ ಹಾಜರಿರಲಿಲ್ಲ)

**ಪ್ರಶ್ನೆ ಸಂಖ್ಯೆ 3920**

(ಉತ್ತರಗಳನ್ನು ಲಗತ್ತಿಸಲಾಗಿದೆ)